# ಫೆ.1ರಂದು ಡೆವಲಪ್‌ಮೆಂಟ್ ಡೈಲಾಗ್

**ಹುಬ್ಬಳ್ಳಿ:** ದೇಶಪಾಂಡೆ ಫೌಂಡೇಶನ್ ವತಿಯಿಂದ ನಡೆವ ಡೆವಲಪ್‌ಮೆಂಟ್ ಡೈಲಾಗ್-2020 ಹಾಗೂ ''ಸ್ಟಾರ್ಟ್‌ಅಪ್‌ಡೈಲಾಗ್- 2020 ಸಮ್ಮೇಳನ ಫೆ. 1 ಮತ್ತು 2ರಂದು ನಡೆಯಲಿದ್ದು, ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಈ ವರ್ಷದ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಫೌಂಡೇಶನ್‌ನ ಸಂಸ್ಥಾಪಕ ಡಾ. ಗುರುರಾಜ್ ದೇಶಪಾಂಡೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೋಡಣೆ ಉದ್ದೇಶ, ಒಂದುಗೂಡುವಿಕೆ, ನಾವೀನ್ಯತೆ ಮತ್ತು ಪರಿಣಾಮ' (ಅಲೈನಿಂಗ್‌ಇಂಟೆನ್ಷನ್, ಇನೋವೇಷನ್ ಅಂಡ್‌ಇಂಪ್ಯಾಕ್ಟ್) ಎಂಬ ಪರಿಕಲ್ಪನೆಯೊಂದಿಗೆ ಈ ಬಾರಿ ದಿ ಡೆವಲಪ್‌ಮೆಂಟ್ ಡೈಲಾಗ್ -2020 ನಡೆಯಲಿದೆ. ಸಾಮಾಜಿಕ ಸುಧಾರಣೆಯಲ್ಲಿ ಕೇವಲ ಒಂದು ಸಂಸ್ಥೆ ಮಾತ್ರವಲ್ಲದೆ, ಹಲವು ಸಂಸ್ಥೆಗಳನ್ನು ಸೇರ್ಪಡೆ ಮಾಡಿಕೊಂಡು ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಕಾರ್ಯದಲ್ಲಿ ತೊಡಗುವುದರಿಂದ ಹೆಚ್ಚಿನ ಜನತೆಗೆ ಒಳಿತಾಗಲಿದೆ. ಇದೆ ನಿಟ್ಟಿನಲ್ಲಿ ಸಂಸ್ಥೆಗಳ ಸಿಎಸ್‌ಆರ್ ಅನುದಾನವನ್ನು ಬಳಸಿಕೊಳ್ಳುವ ಯತ್ನ ನಡೆಯಲಿದೆ ಎಂದರು.

ಬಿವಿಬಿ ಎಂಜಿನಿಯರಿಂಗ್ ಕಾಲೇಜು ಆವರಣದ ದೇಶಪಾಂಡೆ ಫೌಂಡೇಶನ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 10ಕ್ಕೆ ಪ್ರಾರಂಭದ ಗೋಷ್ಠಿಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ. ಕೃಷಿಯ ಸಾಮರ್ಥ್ಯತೆ, ಕೌಶಲ್ಯತೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಬಗ್ಗೆ ಸೇರಿದಂತೆ ಮೂರು ವಿಧದಲ್ಲಿ ತಂಡಗಳನ್ನು ರಚಿಸಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ತಜ್ಞರು, ಸುಧಾರಕರು, ನೀತಿರೂಪಕರು ಭಾಗವಹಿಸಿ ಸಲಹೆ ನೀಡಲಿದ್ದಾರೆ ಎಂದರು. ಗೋಕುಲ್‌ರಸ್ತೆಯ ದೇಶಪಾಂಡೆ ಸ್ಕಿಲ್ಲಿಂಗ್ ಆವರಣದಿಂದ 'ಯುವ ಸಮಿತಿ' ತಂಡ ಕಾರ್ಯಕ್ರಮ ನಡೆಯಲಿದೆ. ಸಂಜೆ ಇನ್ಫೋಸಿಸ್ ಸಭಾಂಗಣದಲ್ಲಿ 'ಇವನಿಂಗ್ ವಿತ್ ಲೆಜೆಂಡ್ಸ್' ನಡೆಯಲಿದ್ದು, ಏರಿಯನ್ ಕೆಪಿಟಲ್‌ನ ಅಧ್ಯಕ್ಷ ಮತ್ತು ಜಿಎಂಆರ್ ಸಮೂಹ ಅಧ್ಯಕ್ಷ ಮೋಹನದಾಸ್ ಪೈ ಪಾಲ್ಗೊಳ್ಳಲಿದ್ದಾರೆ ಎಂದರು. ಫೆ. 2ರಂದು 'ಸ್ಟಾರ್ಟ್‌ಅಪ್ ಡೈಲಾಗ್-2020' ಕಾರ್ಯಕ್ರಮ ಗೋಕುಲ ರಸ್ತೆಯ ದೇಶಪಾಂಡೆ ಸ್ಟಾರ್ಟ್‌ಅಪ್ ಕ್ಯಾಂಪಸ್‌ನಲ್ಲಿ ನಡೆಯಲಿದ್ದು, ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್ ಅನ್ನು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಉದ್ಘಾಟಿಸಲಿದ್ದಾರೆ ಎಂದರು. ಎರಡು ದಿನದ ಸಮ್ಮೇಳನದಲ್ಲಿ ಖ್ಯಾತ ಉದ್ಯಮಿಗಳು ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಹ ಸಂಸ್ಥಾಪಕಿ ಡಾ. ಜಯಶ್ರೀ ದೇಶಪಾಂಡೆ, ದೇಶಪಾಂಡೆ ಫೌಂಡೇಶನ್‌ನ ಸಿಇಒ ವಿವೇಕ್ ಪವಾರ್, ದೇಶಪಾಂಡೆ ಸ್ಟಾರ್ಟ್‌ಅಪ್‌ನ ಸಿಇಒ ಸಿ.ಎಂ ಪಾಟೀಲ್ ಹಾಗೂ ದೇಶಪಾಂಡೆ ಸ್ಕಿಲ್ಲಿಂಗ್‌ನ ಸಿಒಒ ಪಿ.ಎನ್. ನಾಯಕ್ ಇದ್ದರು.